# ಹಸಿರು ನುಡಿ

## ಕೃಷಿಯೊಂದೆ ಸತ್ಯ, ಉಳಿದಿದ್ದೆಲ್ಲ ಮಿಥ್ಯ

ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ

R A W E P
ಮಣ್ಣೆ
2022-23



ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವು ಪದವಿಯ ಒಂದು ಅವಿಭಾಜ್ಯ ಅಂಗವಾಗಿಗದ್ದು,ಈ ತರುವಾಯ ಹಳ್ಳಿಗಳಲ್ಲಿ ಪ್ರಾಯೊಗಿಕವಾಗಿ ಕೃಷಿ ಅನುಭವ ಪಡೆಯಲು ನಮ್ಮ ವಿಧ್ಯಾರ್ಥಿಗಳಿಗೆ ಸಹಕಾರಿಯಾಗಿದೆ.ಗ್ರಾಮೀಣ ಸೊಬಗಿನ ಅನುಭವ ,ರೈತಭಾಂದವರ ಜೊತೆ ಒಡನಾಡುವುದರೊಂದಿಗೆ ಸಂವಹನ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಒಂದು ಉತ್ತಮ ಅವಕಾಶ ನೀಡುತ್ತದೆ.ಇದರಿ೦ದಾಗಿ ವಿದ್ಯಾರ್ಥಿಗಳ ಮನೊಸ್ಥೈರ್ಯ, ಆತ್ಮವಿಶ್ವಾಸದ ವೃದ್ಧಿಯಾಗುವುದು. ಈ ಸಮಯದಲ್ಲಿ ರೈತರು ತಮ್ಮ ಅನುಭವದಿಂದ ಪಡೆದ ಜ್ಞಾನದಿಂದ ಕಲಿಯಲು ಮತ್ತು ಅವರಿಗೆ ವಿವಿಧ ತಾಂತ್ರಿಕತೆಗಳನ್ನು ವಿದ್ಯಾರ್ಥಿಗಳಿಂದ ತಿಳಿಸಲು ಸಹಕಾರಿಯಾಗಿದೆ. ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗುವ ಚಟುವಟಿಕೆಗಳನ್ನು ಹಾಗೂ ಅನುಭವಗಳನ್ನೂ ವ್ಯಕ್ತಪಡಿಸಲು ಈ "ಹಸಿರು ನುಡಿ" ಒಂದು ಕೈಗನ್ನಡಿಯಂತೆ ಪ್ರಕಟಗೊಂಡಿದೆ.ವಿದ್ಯಾರ್ಥಿಗಳ ಈ ಪ್ರಯತ್ನವು ಉತ್ತಮವಾಗಿ ಮೂಡಿಬರಲೆಂದು ಶುಭ ಹಾರೈಸುತ್ತೇನೆ.



-ಡಾ.ವೈ.ಎನ್.ಶಿವಲಿಂಗಯ್ಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕೃಷಿ ವಿಸ್ತಾರಣ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು




ಡಾ|| ಸಿ.ಎಂ.ಸವಿತ
ಸಹ ಪ್ರದ್ಯಾಪಕರು
ಕೃಷಿ ವಿಸ್ತಾರಣ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# ಅಗೆದಂತೆಲ್ಲ ಸಿಗುವುದು ಮಣ್ಣೆಯ ಇತಿಹಾಸ








ಮಣ್ಣೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿದ್ದು ನೆಲಮಂಗಲದಿಂದ 25km ದೂರದಲ್ಲಿರುವ ಗ್ರಾಮ. ಮಣ್ಣೆ ಆಡುಭಾಷೆಯಲ್ಲಿ ಬಳಸುವ ಒಂದು ಸ್ಥಳನಾಮ. ಅಗೆದಂತೆಲ್ಲ ಸಿಗುವುದು ಮಣ್ಣೆಯ ಇತಿಹಾಸ ಎಂಬಂತೆ ಶಾಸನಗಳಲ್ಲಿ ಕಂಡುಬರುವಂತೆ ಇದರ. ಪೂರ್ಣನಾಮ ಮಾನ್ಯಪುರ .

ಮಣ್ಣೆಯ ಖಚಿತವಾದ ಪ್ರಸ್ತಾಪ ಮೊದಲ ಬಾರಿಗೆ ಕಂಡುಬರುವುದು ಶ್ರೀಪುರುಷನ ಕ್ರಿ.ಶ.750 ರ ಜಾವಳಿ ಶಾಸನದಲ್ಲಿ.ಅದರ ಪ್ರಕಾರ ಆ ದಿನದಂದು ಶ್ರೀಪುರುಷನು ಮಣ್ಣೆಯಲ್ಲಿದ್ದ ಮತ್ತು ಮಣ್ಣೆಯು ವಿಜಯಸ್ಕನ್ಧಾವಾರ ಎಂದರೆ ಯುದ್ಧದ ನೆಲೆಯಗಿತ್ತು ಎಂದು ಖಚಿತವಾಗುತ್ತದೆ.ಈ ಕಾರಣದಿಂದ ಶ್ರೀಪುರುಷನ ಕಾಲಕ್ಕೆ ಮಣ್ಣೆಯು ಗಂಗರಾಜರ ನೆಲೆಬೀಡು / 2ನೇ ರಜಧಾನಿಯಾಯಿತು .ರಾಷ್ಟ್ರಕೂಟರು ಮತ್ತು ಗಂಗರ ನಡುವೆ ಯುದ್ಧದ ನೆಲೆಯಾಗಿತ್ತೆಂದು ಖಚಿತವಾಗಿದೆ.

ಮಣ್ಣೆಯು ಈಗ  ಐತಿಹಾಸಿಕವಾಗಿಯು ಸದೃಢವಾದ ಕಟ್ಟಡದ ಮೇಲೆ ನಿಂತಿದೆ. ಪೂರ್ವಾಭಿಮುಖವಾಗಿ ನಿರ್ಮಿಸಿದ ಕಪಿಲೇಶ್ವರ ದೇವಾಲಯದಲ್ಲಿ ಆಹರ್ಪತಿಯ ಪೂಜೆಯಾಗುತ್ತಿದೇಂದು ಇತ್ತೀಚಿನ ವರದಿ. ಮುಂದೆಯೇ ಇರುವ ಅಕ್ಕ ತಂಗಿಯರ ದೇವಾಲಯಗಳು ಮತ್ತು ಜೈನ ಬಸದಿಗಳು ಗಂಗರ ಆಳ್ವಿಕೆಯನ್ನು ಕಣ್ಮುಂದೆ ತರುತ್ತವೆ

# ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ

**ಈ ಕಾರ್ಯಕ್ರಮದ ಮೂಲ ಉದ್ದೇಶಗಳು ಇಂತಿವೆ:**

1.ಕೃಷಿಗೆ ಸಂಬಂಧಿಸಿದಂತೆ ಗ್ರಾಮೀಣ ಪರಿಸ್ಥಿತಿ ಹಾಗೂ ಅದಕ್ಕೆ ಸಂಬಂಧಿಸಿರುವ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಿಕೊಡುವುದು.


2.ರೈತರ ಸಾಮಜೀಕ-ಆರ್ಥಿಕ ಪರಿಸ್ಥಿತಿಗಳ ಮತ್ತು ಅವರ ಸಮಸ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯವಾಗುವಂತೆ ಮಾಡುವುದು .

3.ಪ್ರಾಯೊಗಿಕ ತರಬೇತಿಯ ಮೂಲಕ ಸ್ಥಳೀಯ ನೈಜ ಕ್ಷೇತ್ರದ ಪರೀಸ್ಥಿತಿಗಳಿಗೆ ಸಂಬಂಧಿಸಿದ ರೋಗ ನಿರ್ಣಯ ಮತ್ತು ಪರಿಹಾರ ಜ್ಞಾನವನ್ನು ನೀಡಲು ವಿದ್ಯರ್ಥಿಗಳನ್ನು ಸಿದ್ಧರನ್ನಾಗಿಸುವುದು.

4.ತಂತ್ರಜ್ಞಾನ ವರ್ಗಾವಣೆಯಲ್ಲಿ ಇತ್ತಿಚಿನ ವಿಸ್ತರಣಾ ವಿಧಾನಗಳನ್ನು ಬಳಸಿಕೊಂಡು ರೈತರೊಂದಿಗೆ ಪರಿಣಾಮಕಾರಿ ಸಂವಹನ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು.

5.ಸಂಕೀರ್ಣ ಕೃಷಿ ಸಮಸ್ಯೆಗಳನ್ನು ಪರಿಹರಿಸಲು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಬೆಳೆಸುವುದು.

6.ನಡೆಯುತ್ತಿರುವ ವಿಸ್ತರಣಾ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು.




RAWEP

## ಮಣ್ಣೆಯ ಪ್ರಮುಖ ಬೆಳೆಗಳು

1.ರಾಗಿ

2.ತೊಗರಿ

3. ಅವರೆ

4.ಜೋಳ

5.ಅಡಿಕೆ

6.ತೆಂಗಿನ ಮರ









# ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ





## ಮಾಡಿಸಿರಿ ಬೆಳೆಯ ವಿಮೆ, ಇನ್ನೆತಕೆ ಬೇಳೆಹಾನಿಯ ಭ್ರಮೆ.

ಮೊದಲ ದಿನವೇ ಮಣ್ಣೆಯಲ್ಲಿ ಕೃಷಿ ಅಧಿಕಾರಿಗಳ ಭೇಟಿಯಾಯಿತು. ಅವರೊಂದಿಗೆ ಬೆಳೆವಿಮೆಯ (ಫಸಲ್ ಭಿಮ ಯೋಜನೆ) ಪ್ರಚಾರ ಮುಂದುವರೆಸಿದೆವು . ಮಳೆ,ಕೀಟ , ರೋಗ, ಇತ್ಯಾದಿಗಳಿಂದ ಬೆಳೆಹಾನಿಯ ಹೊಣೆಯಿಂದ ತಪ್ಪಿಸಿಕೊಳ್ಳಲು ಬೆಳೆ ವಿಮೆ ಅತೀ ಮುಖ್ಯ ಎಂದು ಜನರಿಗೆ ಮನವರಿಕೆ ಮಾಡಿದೆವು




**: ಹರ್ ಘರ್ ತಿರಂಗ.**

75 ನೇ ಸ್ವಾತಂತ್ರೋತ್ಸವದ ಪ್ರಯುಕ್ತ 3 ದಿನಗಳವರೆಗೆ ಹಮ್ಮಿಕೊಂಡಿದ್ದ ಹರ್ ಘರ್ ತಿರಂಗ ದಲ್ಲಿ ಸಕ್ರೀಯವಾಗಿ ಪಾಲ್ಗೊಂಡೆವು.

# 75 ನೇ ಅಮೃತಮಹೋತ್ಸವ

ಸ್ವಾತಂತ್ರ್ಯಕ್ಕೆ ಎಂದೂ ಬೆಲೆ ಕಟ್ಟಲಾಗದು,ಅದು ಜೀವನದ ಉಸಿರು.ದೇಶಕ್ಕೆ ಸ್ವತಂತ್ರ ಬಂದು 75 ವರ್ಷಗಳು ತುಂಬಿರುವ ಸ್ಮರಣಾರ್ಥ, ಆಜಾದಿ ಅಮೃತ್ ಮಹೊತ್ಸವದ ಆಚರಣೆ.ಇದರ ಭಾಗವಾಗಿ ಹರ್ ಘರ್ ತಿರಂಗ ಅಭಿಯಾನವನ್ನು ಆಚರಿಸಿದ್ದೆವೆ.ತ್ರಿವರ್ಣ ದ್ವಜಕೆ ಸೂಕ್ತ ಗೌರವವನ್ನು ಕೊಡುವ ಮೂಲಕ ಊರ ಗ್ರಾಮಸ್ಥರೊಂದಿಗೂ,ಶಾಲಾ ಮಕ್ಕಳೊಂದಿಗೂ ಸ್ವತಂತ್ರ ದಿನದ ಸಿಹಿಯ ಹಂಚಿಕೊಡೆವು.











**ಜಿಲ್ಲಾಧಿಕಾರಿಗಳ ನಡಿಗೆ,ಹಳ್ಳಿಯ ಕಡಿಗೆ.**

ಹಳ್ಳಿಯ ಜನರ ಪರೀಸ್ಥಿತಿ ಮತ್ತು ಸಮಸ್ಯಗಳನ್ನು ತಿಳಿಯಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯಾದ ಲತಾ ಮೇಡಂ ಅವರು ಈ ಕಾರ್ಯಕ್ರಮಕೆ ಚಾಲ್ತಿನೀಡಿದರು. ಜನರ ಅಹವಾಲುಗಳನ್ನು ಸ್ವೀಕರಿಸುತ್ತಾ ಅಭಿವೃದ್ಧಿ ಬೆಳಕ ಚೆಲ್ಲುವ ಭರವಸೆ ನೀಡಿದರು.ರೈತ ಸಂಪರ್ಕ ಕೇಂದ್ರದ ಮಳಿಗೆಯ ಸಿದ್ಧತೆಯ ನಂತರ ಅಲ್ಲಿ ಹಾಜರಿದ್ದ ಜೇನು ಕೃಷಿ,ಪಶುವೈದ್ಯಕೀಯ, ತೋಟಗಾರಿಕೆ, ರೇಶ್ಮೆ ಕೃಷಿ ಇತ್ಯಾದಿ ವಿಭಾಗದ ಅಧಿಕಾರಿಗಳ ಪರಿಚಯದೊಂದಿಗೆ ನಾವು ಬಂದಿರುವ ಉದ್ದೇಶವನ್ನು ಅವರಿಗೆ ತಲುಪಿಸಿದೆವು.






# ಸ್ವಸ್ಥ ಇಳೆ, ಹಸಿರು ಬೆಳೆ.

ಮಣ್ಣು ಜೀವನದ ಆಧಾರ ಮತ್ತು ನೈಸರ್ಗಿಕ ಪರಿಸರದ ಒಂದು ಪ್ರಮುಖ ಅಂಶ. ಕೃಷಿ ಉತ್ಪಾದಕತೆ ಉಳಿಸಿಕೊಳ್ಳಲು ಮಣ್ಣಿನ ಪರೀಕ್ಷೆ ಅತೀಮುಖ್ಯವಾದುದು. ಮಣ್ಣಿನ ಪರೀಕ್ಷೆಯು ಸಾಮಾನ್ಯವಾಗಿ ಪೌಷ್ಟಿಕಾಂಶದ ಅಂಶ, ಸಂಯೋಜನೆ ಮತ್ತು ಆಮ್ಲತೆ ಮಟ್ಟಗಳಂತಹ ಗುಣ ಲಕ್ಷಣಗಳನ್ನು ನೀರ್ಧರಿಸಲು ಮಣ್ಣಿನ ಮಾದರಿಯ ವಿಶ್ಲೇಷಣೆಯನ್ನು ಸೂಚಿಸುತ್ತದೆ. ಮಣ್ಣಿನ ಪರೀಕ್ಷೆಗೂ ಮೊದಲು ಮಣ್ಣಿನ ಮಾದರಿ ತೆಗೆಯುವಿಕೆಯು ಅದರದ್ದೇ ಆದ ಮಹತ್ವ ವನ್ನು ಪಡೆದಿದೆ .ಯಾವುದೇ ಒಂದು ಸಣ್ಣ ಲೋಪದೋಷವಿಲ್ಲದೆ ನಿಯಮಾನುಸಾರವಾಗಿಯೇ ಮಣ್ಣಿನ ಮಾದರಿಯನ್ನು ಸಂಗ್ರಹಿಸಿದೆವು .ಅದರಂತೆ ನಾವು ಈ ಗ್ರಾಮದ 60 ವಿವಿಧ ಕೃಷಿ ಭೂಮಿಯ ಮಣ್ಣಿನ ಮಾದರಿಗಳನ್ನು ಸಂಗ್ರಹಸಿ ಅವುಗಳ ಪರೀಕ್ಷೆ ಅಥವಾ ವಿಶ್ಲೇಷಿಣೆಗಾಗಿ IFFCO ಕಂಪನಿಯವರಿಗೆ ವಹಿಸಿದೆವು.













# ಸಾಮಾನ್ಯ ಸಭೆ.

ಮೊದಲ ಸಾಮಾನ್ಯ ಸಭೆಯನ್ನು ತ್ಯಾಮಗೊಂಡ್ಲುವಿನ ಕೃಷಿ ಅಧಿಕಾರಿಯಾದ ಅಂಜನಾ ಮೇಡಂ ಅವರ ಸಮ್ಮುಖದಲ್ಲಿ ನೆರವೇರಿಸಿದೆವು .ಗ್ರಾ.ಪಂ.ಉಪಾಧ್ಯಕ್ಷರು,ಸದಸ್ಯರು,ಮತ್ತು ಗ್ರಾಮಸ್ಥರೆಲ್ಲಾ ಸೇರಿದ್ದರು.ನಾವು ಈ ಊರಿಗೆ ಬಂದಿರುವ ಸದುದ್ದೇಶವನ್ನು ಗ್ರಮಸ್ಥರೊಂದಿಗೆ ಹಂಚಿಕೊಂಡೆವು.ಅಲ್ಲದೆ ಅಂಜನಾ ಮೇಡಂ ಅವರು E KYC ಮಾಡುವ ವಿಧಾನ ಮತ್ತು ಮಹತ್ತ್ವ ವನ್ನು ರೈತಬಾಂಧವರಿಗೆ ತಿಳಿಸಿದರು.ರೈತರಿಗೆ ಇರುವ ಕೃಷಿಗೆ ಸಂಬಂಧಪಟ್ಟ ಸಂದೇಹಗಳನ್ನೂ ಪರಿಹರಿಸಿದರು. ಕೃಷಿಯಲ್ಲು ನಿರ್ಲಕ್ಷಿಸಿ ಕೈಗಾರೀಕರಣದ ಹಿಂದೆ ಓಡುತ್ತಿರುವ ಜನತೆಗೆ ಒಂದೊಳ್ಳೆ ಕಿವಿಮಾತನ್ನು ತಲುಪಿಸಿ,ಭೂಮಿಯನ್ನು ಯಾರಿಗೂ ಮಾರಬೇಡಿ ಎಂದು ಸಂದೇಶಿಸಿದರು.

## ಬೆಳೆ ಸಂಗ್ರಹಾಲಯ ವಿನ್ಯಾಸ

ಬೆಳೆಸಂಗ್ರಹಾಲಯಕೆ ಭೂಮಿ ಸಿಕ್ಕನಂತರ ಅದಕ್ಕೆ ಬೇಕಾಗುವಷ್ಟು ಕೊಟ್ಟಿಗೆ ಗೊಬ್ಬರವನ್ನು ಬಳಸಿದೆವು. ಇದರಿಂದಾಗಿ ಮಣ್ಣಿನಲ್ಲಿರುವ ಸಾವಯುವ ಇಂಗಾಲದ ಜೊತೆಗೆ ಮಣ್ಣಿಗೆ ಬೇಕಾಗುವ ಸೂಕ್ಷ್ಮಜೀವಿಗಳ ಅಭಿವೃದ್ಧಿಯಾಗುವುದು.ನಂತರ ಅದರಲ್ಲಿ ಬೆಳೆಯುವ ಬೆಳೆಗಳ ಸ್ವರೂಪ,ಸ್ವಭಾವದ ಅಧಾರದ ಮೇಲೆ ಅದಕ್ಕೆ ಸರಳವಾದ ವಿನ್ಯಸದ ರಚನೆಯಾಯಿತು.









## ಹೈನುಗರಿಕೆ; ಆದಾಯದಲ್ಲಿ ಚೇತರಿಕೆ

ಮಣ್ಣೆ ರೈತರಿಗೆ ಕೃಷಿ ಬಿಟ್ಟು ಅತೀ ಹೆಚ್ಚು ಆದಾಯ ಒದಗಿಸುವುದು ಹೈನುಗಾರಿಕೆ.ಇಲ್ಲಿ ಪ್ರತಿನಿತ್ಯ 1200-1400 ltr ಹಾಲು ಉತ್ಪಾದನೆ ಆಗುತ್ತದೆ ಇಲ್ಲಿನ ಪ್ರಮುಖ ತಳಿಗಳು HF ಮತ್ತು Jersey. ಹೈನುಗಾರಿಕೆಯು ಇಲ್ಲಿನ ಸ್ವಾವಲಂಬನೆ ಬದುಕಿನ ಮಾರ್ಗವಾಗಿದ್ದು ಜೀವನೋಪಯದ ಮಾರ್ಗವಾಗಿದೆ

